ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1251/2021

ಚಾಸಾ:3 ಪ್ರಾಸಾ:3

ದಿನಾಂಕ: 24.06.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಚಂದ್ರಶೇಖರ |
| ತಂದೆಯ ಹೆಸರು | : | ನಾಗೇಶ ಭಂಡಾರಿ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಶೆಲೂನ್ |
| ವಾಸ ಸ್ಥಳ | : | ಕೊಟೇಶ್ವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಕೊಟೇಶ್ವರದ ಪ್ರೀತಂ ಬಾರ್ ಎದುರು 19 ನೇ ತಾರೀಕು 2021ರಂದು ರಾತ್ರಿ 9-30ರ ಸಮಯದಲ್ಲಿ ಅಂಗಡಿಯನ್ನು ಮುಚ್ಚಿ ನಾನು ಹೊರಗೆ ನಿಂತಿದ್ದಾಗ ಎ. ಪಿ. ಎಂ ಬಸ್ಸು ಅತೀ ವೇಗವಾಗಿ ತಪ್ಪು ಮಾರ್ಗದಲ್ಲಿ ಬಂದು ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಇದರಿಂದ ಬೈಕು ಜಖಂಗೊಂಡು ಅದರ ಸವಾರ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ಸದ್ರಿ ಬಸ್ಸಿನ ಚಾಲಕ ದಿನೇಶ್ ಪೂಜಾರಿಯಾಗಿರುತ್ತಾರೆ.

ಸದ್ರಿ ಸ್ಥಳದಲ್ಲಿ ಪಂಚನಾಮೆ ಜರುಗಿಸುವ ವೇಳೆಗೆ ನಾನು ಹಾಜರು ಇದ್ದು, ಚಾಸಾ-7ರವರು ಇದ್ದು, ಚಾಸಾ-4 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 4-30 ರಿಂದ 5 ಗಂಟೆ ಸಮಯದಲ್ಲಿ ಜರುಗಿಸಿ ನಕ್ಷೆ ತಯಾರಿಸಿ ಪೋಟೋ ತೆಗೆದು ನನ್ನ ಸಹಿ ಪಡೆದಿರುತ್ತಾರೆ.

ಅಪಘಾತಕ್ಕೆ ಒಳಗಾದ ಬೈಕು ಠಾಣೆಯಲ್ಲಿ ಇದ್ದು, ಮರುದಿನ ಅದನ್ನು ವಶಕ್ಕೆ ಪಡೆಯುವ ವೇಳೆಗೆ ನಾವು 3 ಜನರು ಹಾಜರು ಇರುತ್ತೇವೆ. ಆಗ ನನ್ನ ಸಹಿ ಪಡೆದಿರುತ್ತಾರೆ. ಅದೇ ದಿನ ಈ ಕುರಿತಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿ ಸ್ಥಳ ಪಂಚನಾಮೆ, ನಕ್ಷೆ, ಸ್ವತ್ತು ಸ್ವಾಧೀನತಾ ಪಂಚನಾಮೆ ಹಾಗೂ 4 ಫೋಟೋಗಳನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಗಳನ್ನು ನಿಪಿ-3 ರಿಂದ 9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ರಿಂದ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆ ರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ</u>

ಅಪಘಾತವು ದಿಃ 19 -2021 ರಂದು ಆಗಿರುತ್ತದೆ. ನಾನು ಅಂಗಡಿಯನ್ನು ರಾತ್ರಿ 9-30ಕ್ಕೆ ಮುಚ್ಚಿರುತ್ತೇನೆ. ಪ್ರೀತಂ ಬಾರ್ ನ ಪಕ್ಕದಲ್ಲಿ ನನ್ನ ಅಂಗಡಿ ಇರುತ್ತದೆ. ಅಲ್ಲಿಂದ ಕೋಟೇಶ್ವರ ಬೈಪಾಸ್ ಗೆ ಸುಮಾರು 100 ಮೀಟರ್ ಇರಬಹುದು. ನಾನು ಕೋಟೇಶ್ವರದ ಬೈಪಾಸ್ ಕಡೆಗೆ ಹೋಗುತ್ತಿದ್ದೆ. ನನ್ನ ಮನೆ ಬೀಜಾಡಿಯಲ್ಲಿ ಇದೆ. ನಾನು ಮತ್ತು 5-6 ಜನ ಸ್ನೇಹಿತರು ಇದ್ದೇವು. ಅವರುಗಳೆಂದರೆ ಕಿರಣ್, ರಾಘು, ಅವಿನಾಶ್ ಮತ್ತು ಇತರರು. ನಮ್ಮ ಮುಖವನ್ನು ಪ್ರೀತಂ ಬಾರ್ ಕಡೆಗೆ ಮಾಡಿದ್ದೇವು. ಅದು ನಮ್ಮ ಪಕ್ಕದಲ್ಲಿ ಬರುತ್ತಿತ್ತು. ಬೈಕು ಹಾಲಾಡಿ ರಸ್ತೆಯಿಂದ ಬರುತ್ತಿತ್ತು. ಬೈಕು ಬರುವುದನ್ನು 50 ಮೀಟರ್ ದೂರದಿಂದ ನೋಡಿರುತ್ತೇವೆ. ಆತ ಹೆಲ್ಮೇಟ್ ಧರಿಸಿದ್ದರು. ಅಪಘಾತ ಪೂರ್ವದಲ್ಲಿ ಬಸ್ಸನ್ನು 20 ಮೀಟರ್ ದೂರದಲ್ಲಿ ನೋಡಿರುತ್ತೇನೆ.

ಶಬ್ದ ಕೇಳಿ ಅಪಘಾತವಾಗಿರುವುದು ತಿಳಿದಿರುತ್ತದೆ. ನಾನು ಪ್ರಥಮವಾಗಿ ಹೋಗುವಾಗ ಸುಮಾರು 100 ಜನರು ಸೇರಿದ್ದರು. ಪ್ರೀತಂ ಬಾರ್ ನ ಎಲ್ಲಾ ಕೆಲಸಗಾರರು ಸ್ಥಳದಲ್ಲಿ ಇದ್ದರು. ಅಪಘಾತದ ಸ್ಥಳದಲ್ಲಿ ಅಪಘಾತಕ್ಕೆ ಸಂಬಂಧಿಸಿದ ಕುರುಹುಗಳು ಇದ್ದ ಬಗ್ಗೆ ನನಗೆ ನೆನಪಿಲ್ಲ. ಸುಮಾರು 2 ನಿಮಿಷದಲ್ಲಿ ಸ್ಥಳಕ್ಕೆ ತಲುಪಿರುತ್ತೇವೆ. ಸ್ಥಳಕ್ಕೆ ಪೊಲೀಸರು ಅರ್ಧ ಗಂಟೆಗೆ ಬಂದಿರುತ್ತಾರೆ. ನಾನು ಪೊಲೀಸರಿಗೆ ಮಾಹಿತಿ ನೀಡಿಲ್ಲ. ನಾನು ಸ್ಥಳದಲ್ಲಿ ರಾತ್ರಿ 12 ಗಂಟೆಯವರೆಗೂ ಇದ್ದೆ. ಪೊಲೀಸರು ಬರುವ ವೇಳೆಗೆ ವಾಹನಗಳನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಲಾಗಿತ್ತು. ಯಾವ ದಿಕ್ಕಿನಲ್ಲಿ ಸದ್ರಿ ವಾಹನಗಳನ್ನು ಇರಿಸಲಾಯಿತು ಎಂದು ತಿಳಿದಿಲ್ಲ. ಸಾರ್ವಜನಿಕರು ಸದ್ರಿ ವಾಹನಗಳನ್ನು ಅಲ್ಲಿ ಇರಿಸಿರುತ್ತಾರೆ.

ಗಾಯಾಳುಗಳನ್ನು ಪ್ರೀತಂ ಬಾರ್ ನಲ್ಲಿರುವ ಗ್ರಾಹಕರು ಸ್ಥಳಾಂತರಿಸಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದಾಗ ಅಪಘಾತದ ಸ್ಥಳವನ್ನು ನಾವೆಲ್ಲರೂ ತೋರಿಸಿಕೊಟ್ಟಿದ್ದೇವೆ. ಆಗ ದಾಖಲೆ ಮಾಡಿರುತ್ತಾರೆ. ಪೊಲೀಸರು ರಾತ್ರಿ 10 ಗಂಟೆಗೆ ಬಂದಿದ್ದರು. ಆ ವೇಳೆಗೆ ನಿಪಿ-3 ಮತ್ತು 4ಕ್ಕೆ ಸಹಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ-7ರವರು ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು

ಅಪಘಾತಕ್ಕೀಡಾದ ವಾಹನಗಳನ್ನು ಸ್ಥಳದಿಂದ ತೆಗೆದುಕೊಂಡು ಹೋಗಿರುತ್ತಾರೆ. 20ನೇ ತಾರೀಕಿಗೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಅಲ್ಲಿ 2-3 ಸಹಿಗಳನ್ನು ಮಾಡಿರುತ್ತೇನೆ. ಮೇಲೆ ಗುರುತಿಸಿದ ದಾಖಲೆಗಳ ಪೈಕಿ ಯಾವ ಸಹಿಗಳನ್ನು ಸ್ಥಳದಲ್ಲಿ ಹಾಗೂ ಠಾಣೆಯಲ್ಲಿ ಮಾಡಿರುತ್ತೇನೆ ಎಂದು ಹೇಳಲಾಗುವುದಿಲ್ಲ. ನಿಪಿ-3 ಮತ್ತು 4ಕ್ಕೆ ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ.

ಆರೋಪಿಯ ಬಸ್ಸಿನ ಚಾಲಕನೆಂದು ಅಲ್ಲಿನ ಸ್ಥಳೀಯರಿಂದ ತಿಳಿದು ಬಂದಿರುತ್ತದೆ. ಮೃತ ಪ್ರವೀಣ್ ಮತ್ತು ಆತನ ಅಣ್ಣ ಚಾಸಾ-4 ನನ್ನ ಸ್ನೇಹಿತರು. ಮಾರನೇ ದಿನ ಚಾಸಾ-4 ರವರು ಘಟನಾ ಸ್ಥಳಕ್ಕೆ ಬಂದಿದ್ದರು. ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಅದನ್ನು ಬರೆದಿರುತ್ತಾರೆ. ಮರುದಿನ ಪಂಚನಾಮೆ ಜರುಗಿಸುವ ವೇಳೆಗೆ ಪೊಲೀಸರು ಬರವಣಿಗೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಅಪಘಾತಕ್ಕೆ ಒಳಪಟ್ಟ ಯಾವುದೇ ವಾಹನಗಳ ಬಿಡಿಭಾಗಗಳು ಸ್ಥಳದಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಹಿ ಪಡೆದ ದಾಖಲೆಗಳಲ್ಲಿ ಏನೆಲ್ಲಾ ಬರೆದಿದೆ ಎಂದು ಹೇಳಲಾಗುವುದಿಲ್ಲ.

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಪ್ರವೀಣ ಮತ್ತು ಚಾಸಾ-4 ರವರು ನನ್ನ ಸ್ನೇಹಿತರಾದ ಕಾರಣ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಅಪಘಾತದ ಪ್ರತ್ಯಕ್ಷದರ್ಶಿ ಅಲ್ಲ ಹಾಗೂ ಯಾವುದೇ ವಿಚಾರ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ಯಾಕೆ ಪೋಟೋ ತೆಗೆದಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ಪೋಟೋ ತೆಗೆದ ಪೊಲೀಸ್ ಯಾರು ಎಂದು ನನಗೆ ತಿಳಿದಿಲ್ಲ. ನಾನು ಎಲ್ಲಾ ಸಹಿಗಳನ್ನು ಠಾಣೆಯಲ್ಲಿ ಮಾಡಿ ವಾಹನಗಳನ್ನು ಅಲ್ಲೇ ಗುರುತಿಸಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**